ಕರ್ನಾಟಕ ಸರ್ಕಾರ

# ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಸಹ ನಿರ್ದೇಶಕರು-1
## ಆಯುಕ್ತರ ಕಛೇರಿ, ಬೆಂಗಳೂರು ವಿಭಾಗ, ನೃಪತುಂಗ ರಸ್ತೆ, ಬೆಂಗಳೂರು.

ಸಂಖ್ಯೆ: ಅ1/ ಪ್ರೌಶಾಶಿವರ್ಗ 01 /2016-17 ದಿನಾಂಕ: 12.09.2016

ಉಪ ನಿರ್ದೇಶಕರು (ಆಡಳಿತ)
ಸಾರ್ವಜನಿಕ ಶಿಕ್ಷಣ ಇಲಾಖೆ
-----------------
-----------------

ವಿಷಯ : ಬೆಂಗಳೂರು ವಿಭಾಗ ಮಟ್ಟದ ಪ್ರೌಢ ಶಾಲಾ ಶಿಕ್ಷಕರ ವರ್ಗಾವಣೆ ಬಗ್ಗೆ ಕೌನ್ಸಿಲಿಂಗ್‌ಗೆ ಹಾಜರಾಗುವಂತೆ ಹಾಗೂ ಸ್ಥಳೀಯ ಪತ್ರಿಕೆಯಲ್ಲಿ ದಿನಾಂಕ ಪ್ರಕಟಿಸುವ ಬಗ್ಗೆ.
ಉಲ್ಲೇಖ : ಮಾನ್ಯ ಆಯುಕ್ತರು, ಸಾಶಿಇ, ಬೆಂಗಳೂರು ಇವರ ಅಧಿಕೃತ ಜ್ಞಾಪನ ಸಂಖ್ಯೆ : ಸಿ3(7) ಪ್ರಾಶಿ.ವರ್ಗ 01/2014-15 ದಿನಾಂಕ:23.05.2014

***

2016-17ನೇ ಸಾಲಿನ ವಿಭಾಗ ಮಟ್ಟದ ಘಟಕದೊಳಗಿನ ಕೋರಿಕೆ ವರ್ಗಾವಣೆಯನ್ನು ಕೌನ್ಸಿಲಿಂಗ್ ಮೂಲಕ ದಿನಾಂಕ: 20.09.2016 ರಿಂದ 23.09.2016 ರವರೆಗೆ **ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ, 2ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-10** ಇಲ್ಲಿ ಬೆಳಿಗ್ಗೆ 10.00 ಗಂಟೆಯಿಂದ ನಡೆಸಲಾಗುತ್ತದೆ.

ಆದ್ದರಿಂದ ಸದರಿ ದಿನಾಂಕಗಳಂದು ನಡೆಯುವ ಕೌನ್ಸಿಲಿಂಗ್‌ಗೆ ನಿಮ್ಮ ಕಛೇರಿಯ ಸಿಬ್ಬಂದಿಯವರೊಂದಿಗೆ ಹಾಜರಾಗಿ ಕೌನ್ಸಿಲಿಂಗ್‌ನಲ್ಲಿ ಭಾಗವಹಿಸಲು ತಿಳಿಸಿದೆ. ಹಾಗೂ ಕೋರಿಕೆ ವರ್ಗಾವಣೆಗಳ ಬಗ್ಗೆ ಕೌನ್ಸಿಲಿಂಗ್ ನಡೆಯುವ ಸ್ಥಳ ಮತ್ತು ದಿನಾಂಕಗಳನ್ನು ತಮ್ಮ ಕಛೇರಿಯ ಮಾಹಿತಿ ಫಲಕದಲ್ಲಿ ಪ್ರಕಟಿಸಿ ಸ್ಥಳೀಯ ಪತ್ರಿಕೆಗಳಲ್ಲಿ ಪ್ರಕಟಿಸಲು ಕ್ರಮ ಕೈಗೊಳ್ಳುವಂತೆ ತಿಳಿಸಿದೆ.

(ಡಿ.ಕೆ.ಶಿವಕುಮಾರ್)
ಸಹ ನಿರ್ದೇಶಕರು.

ಕರ್ನಾಟಕ ಸರ್ಕಾರ

# ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಸಹ ನಿರ್ದೇಶಕರು-1
# ಆಯುಕ್ತರ ಕಛೇರಿ, ಬೆಂಗಳೂರು ವಿಭಾಗ, ನೃಪತುಂಗ ರಸ್ತೆ, ಬೆಂಗಳೂರು.

ಸಂಖ್ಯೆ: ಅ1/ ಪ್ರೌಶಾಶಿವರ್ಗ 01/2016-17 ದಿನಾಂಕ: 12.09.2016

ಸುದ್ದಿ ಸಂಪಾದಕರು,
ದಿನ ಪತ್ರಿಕೆ,

ಬೆಂಗಳೂರು.

ಮಾನ್ಯರೆ

ವಿಷಯ : ಬೆಂಗಳೂರು ವಿಭಾಗ ಮಟ್ಟದ ಪ್ರೌಢ ಶಾಲಾ ಶಿಕ್ಷಕರ ಕೋರಿಕೆ ವರ್ಗಾವಣೆ ವೇಳಾಪಟ್ಟಿಯನ್ನು ಪತ್ರಿಕೆಯಲ್ಲಿ ಪ್ರಕಟಿಸುವ ಬಗ್ಗೆ.

***

2016-17ನೇ ಸಾಲಿನ ಬೆಂಗಳೂರು ವಿಭಾಗದ ಪ್ರೌಢಶಾಲಾ ಶಿಕ್ಷಕರ (24.06.2003 ಪೂರ್ವದಲ್ಲಿ ಸೇವೆಗೆ ಸೇರಿದ ಶಿಕ್ಷಕರು ವಿಭಾಗದ ಒಳಗೆ(ಘಟಕದ ಒಳಗೆ) ಹಾಗೂ 24.06.2003 ನಂತರ ನೇಮಕಗೊಂಡ ಶಿಕ್ಷಕರು ಜಿಲ್ಲೆಯ ಒಳಗೆ ಕೋರಿಕೆ ವರ್ಗಾವಣೆಯನ್ನು ಕೌನ್ಸಿಲಿಂಗ್ ಮೂಲಕ ದಿನಾಂಕ: 20.09.2016 ರಿಂದ 23.09.2016 ರವರೆಗೆ **ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ, 2ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-10** ಇಲ್ಲಿ ಬೆಳಿಗ್ಗೆ 10.00 ಗಂಟೆಯಿಂದ ಈ ಕೆಳಕಂಡ ಆಧ್ಯತಾ ಪಟ್ಟಿ ಕ್ರಮ ಸಂಖ್ಯೆಯಲ್ಲಿರುವ ಅಭ್ಯರ್ಥಿಗಳಿಗೆ ಕೌನ್ಸಿಲಿಂಗ್ ನಡೆಸಲಾಗುತ್ತದೆ. ಅಂತಿಮ ಆಧ್ಯತಾ ಪಟ್ಟಿ ಹಾಗೂ ಖಾಲಿ ಹುದ್ದೆಗಳ ವಿವರವನ್ನು ವೆಬ್ ಸೈಟನಲ್ಲಿ ದಿ:19.09.2016ರಂದು ಪ್ರಕಟಿಸಲಾಗುವುದು.

ಕೋರಿಕೆ ವರ್ಗಾವಣೆ ಕೋರಿರುವ ಶಿಕ್ಷಕರು ಸಂಬಂಧಪಟ್ಟ ಪೂರಕ ದಾಖಲೆಗಳೊಂದಿಗೆ ಹಾಜರಾಗಬೇಕು, ಈ ಬಗ್ಗೆ ಮಾಹಿತಿಗಳನ್ನು ಇಲಾಖೆಯ ವೆಬ್‌ಸೈಟ್‌ನಲ್ಲಿ ನೋಡಬಹುದು. ಎಂಬ ಮಾಹಿತಿಯನ್ನು ಶಿಕ್ಷಕರ ಗಮನಕ್ಕೆ ತಮ್ಮ ಪತ್ರಿಕೆಯ ಎಲ್ಲಾ ಆವೃತ್ತಿಗಳಲ್ಲಿ ಉಚಿತವಾಗಿ ಪ್ರಕಟಿಸಲು ಕೋರಿದೆ.

| ಕ್ರ. ಸಂ | ದಿನಾಂಕ | ಆಧ್ಯತಾ ಪಟ್ಟಿ ಕ್ರಮ ಸಂಖ್ಯೆ |
|---|---|---|
| 1 | 20.09.2016 | 1 ರಿಂದ 500 |
| 2 | 21.09.2016 | 501 ರಿಂದ 1000 |
| 3 | 22.09.2016 | 1001 ರಿಂದ 1548 |
| 4 | 23.09.2016 | 01 ರಿಂದ 183 (ದೈಶಿ)<br>01 ರಿಂದ 97 (ವಿಶೇಷ ಶಿಕ್ಷಕರು) |

ತಮ್ಮ ನಂಬುಗೆಯ,

(ಡಿ.ಕೆ.ಶಿವಕುಮಾರ್)
ಸಹ ನಿರ್ದೇಶಕರು.

12/09
12/9

**ಕರ್ನಾಟಕ ಸರ್ಕಾರ**

**ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆ, ಸಹ ನಿರ್ದೇಶಕರು-1, ಬೆಂಗಳೂರು ವಿಭಾಗ, ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-01**

ಸಂಖ್ಯೆ :ಆ1 ಪ್ರೌಶಾಶಿವರ್ಗ 01/2016-17
ದಿನಾಂಕ:19.09.2016

ವಿಷಯ : ವಿಭಾಗ ಮಟ್ಟದ ಪ್ರೌಢ ಶಾಲಾ ಶಿಕ್ಷಕರಗಳಿಗೆ ನಡೆಸುವ ಕೌನ್ಸಲಿಂಗ್ ಸಮಯದಲ್ಲಿ
ದಾಖಲೆಗಳನ್ನು ಒದಗಿಸುವ ಬಗ್ಗೆ.

ಉಲ್ಲೇಖ : ಮಾನ್ಯ ನಿರ್ದೇಶಕರು.ಸಾಶಿಇ, ಬೆಂಗಳೂರು ಇವರ ಪತ್ರ ಸಂಖ್ಯೆ : ಸಿ4(7) ಪ್ರಾ.ಶಿ.ವರ್ಗ01/2016-17 ದಿನಾಂಕ: 20.04.2016

***

ಸಾರ್ವಜನಿಕ ಶಿಕ್ಷಣ ಇಲಾಖೆಯ 2016-17ನೇ ಸಾಲಿನ ಬೆಂಗಳೂರು ವಿಭಾಗ ಮಟ್ಟದ ವರ್ಗಾವಣೆಯನ್ನು ಕೌನ್ಸಿಲಿಂಗ್ ಮೂಲಕ ನೆಡಸಲು ಈಗಾಗಲೇ ಅಂತಿಮ ಆದ್ಯತಾ ಪಟ್ಟಿಯನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ. ಅದರಂತೆ ದಿನಾಂಕ: 20.09.2016 ರಿಂದ ದಿನಾಂಕ:23.09.2016ರ ವರೆಗೆ **ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ, 2ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-10 (ESI HOSPITAL ಹಿಂಬಾಗ)** ಇಲ್ಲಿ ಬೆಳಿಗ್ಗೆ 10.00 ಗಂಟೆಯಿಂದ ಆಧ್ಯತಾ ಕ್ರಮ ಸಂಖ್ಯೆಯಲ್ಲಿರುವ ಅಭ್ಯರ್ಥಿಗಳಿಗೆ ಕೌನ್ಸಿಲಿಂಗ್ ನಡೆಸಲಾಗುತ್ತದೆ. ಈ ಕೌನ್ಸಲಿಂಗ್‌ನಲ್ಲಿ ಭಾಗವಹಿಸುವ ಆದ್ಯತಾ ಪಟ್ಟಿಯಲ್ಲಿರುವ ಶಿಕ್ಷಕರುಗಳು ಈ ಕೆಳಕಂಡ ದಾಖಲೆಗಳನ್ನು ಕೌನ್ಸಿಲಿಂಗ್ ದಿನದಂದು ಪರಿಶೀಲನೆಗೆ ಹಾಜರಾಗಲು ತಿಳಿಸಿದೆ.

1. ತೀವ್ರತರ ಖಾಯಿಲೆ ಪ್ರಕರಣದಲ್ಲಿ (ಕ್ಯಾನ್ಸರ್, ಕಿಡ್ನಿ ವೈಪಲ್ಯ, ಹೃದಯ ಸಂಬಂಧಿ ಖಾಯಿಲೆಗಳಿಗೆ) ಹಾಗೂ ಅಂಗವಿಕಲ ಶಿಕ್ಷಕರ ಮೀಸಲಾತಿಯಡಿಯಲ್ಲಿ ವರ್ಗಾವಣೆ ಕೋರಿರುವ ಅಭ್ಯರ್ಥಿಗಳು ವೈದ್ಯಕೀಯ ತಪಾಸಣೆಯನ್ನು ವಿಕ್ಟೋರಿಯಾ ಆಸ್ಪತ್ರೆ, ಬೆಂಗಳೂರು ಇವರಿಂದ ಪಡೆದ ವೈದ್ಯಕೀಯ ತಪಾಸಣಾ ಪತ್ರದೊಂದಿಗೆ ಹಾಜರಾಗುವುದು.
2. ಪತಿ ಮತ್ತು ಪತ್ನಿ ಪ್ರಕರಣದಲ್ಲಿ ಕೋರಿರುವ ಶಿಕ್ಷಕರು ಪತಿ, ಪತ್ನಿಯ ಬಗ್ಗೆ ದಾಖಲೆ, ಮೂಲ ಸೇವಾ ದೃಡೀಕರಣ ಪತ್ರ, ಪತಿ ಮತ್ತು ಪತ್ನಿ ಪ್ರಕರಣದಲ್ಲಿ ಎಷ್ಟನೇ ಬಾರಿಗೆ ವರ್ಗಾವಣೆ ಕೋರಲಾಗಿದೆ ಎಂಬ ಬಗ್ಗೆ ದೃಡೀಕರಣ ಸಲ್ಲಿಸುವುದು.
3. ಪತಿ ಅಥವ ಪತ್ನಿ ಆದ್ಯತೆಯಲ್ಲಿ ಕೋರಿರುವ ಶಿಕ್ಷಕರು ಮೂಲ ವಾಸಸ್ಥಳ ದೃಡೀಕರಣ ಪತ್ರ ಸಲ್ಲಿಸುವುದು.
4. ವಿಧವಾ ಶಿಕ್ಷಕಿಯವರ ಪ್ರಕರಣದಲ್ಲಿ ಕೋರಿರುವ ಶಿಕ್ಷಕಿಯರು ಪತಿಯ ಮೂಲ ಮರಣ ಪ್ರಮಾಣ ಪತ್ರ ಸಲ್ಲಿಸುವುದು.
5. ಸೈನಿಕ ಪ್ರಕರಣದಲ್ಲಿ ಕೋರಿರುವ ಅಭ್ಯರ್ಥಿಗಳು ಸಕ್ಷಮ ಪ್ರಾಧಿಕಾರದಿಂದ ಪಡೆದ ಮೂಲಪ್ರಮಾಣ ಪತ್ರ.
6. ವಿವಾಹಿತ ಶಿಕ್ಷಕರ ಪ್ರಕರಣದಲ್ಲಿ ಅಗತ್ಯ ಪ್ರಮಾಣ ಪತ್ರ ಸಲ್ಲಿಸಿ ಆದ್ಯತೆ ಕೋರತಕ್ಕದ್ದು, ಪತಿ ಮತ್ತು ಪತ್ನಿ ಇಬ್ಬರೂ ಸರ್ಕಾರಿ ನೌಕರರಾಗಿದ್ದಲ್ಲಿ ಪತಿ ಅಥವಾ ಪತ್ನಿ ಈ ಆದ್ಯತೆಯಡಿಯಲ್ಲಿ ಎಷ್ಟನೇ ಬಾರಿ ವರ್ಗಾವಣೆ ಪಡೆಯುತ್ತಿರುವುದು ಎಂಬ ಬಗ್ಗೆ ಮುಖ್ಯ ಶಿಕ್ಷಕರಿಂದ ಪಡೆದ ದೃಡೀಕರಣ ಪತ್ರ.
7. ಪ್ರಸಕ್ತ ಸಾಲಿನಲ್ಲಿ ಹೆಚ್ಚುವರಿ ಶಿಕ್ಷಕರಾಗಿ ವರ್ಗಾವಣೆ ಹೊಂದಿದ್ದಲ್ಲಿ, ಹಿಂದಿನ ಶಾಲೆಯಲ್ಲಿ ಮೂರು ವರ್ಷಗಳ ಸೇವೆ ಪೂರ್ಣಗೊಳಿಸಿದ ಬಗ್ಗೆ ಮುಖ್ಯ ಶಿಕ್ಷಕರಿಂದ ಪಡೆದ ಸೇವಾ ದೃಡೀಕರಣ ಪತ್ರ ಸಲ್ಲಿಸುವುದು.

8. ಆದ್ಯತೆಯಲ್ಲಿ ಕೋರಿರುವುದಕ್ಕೆ(**priority claimed**) ಸಂಬಂಧಿಸಿದ ಸೂಕ್ತ ದಾಖಲೆಗಳನ್ನು ಒದಗಿಸಲು ವಿಫಲರಾದಲ್ಲಿ ಕೌನ್ಸಿಲಿಂಗ್‌ನ್ನು ನಿರಾಕರಿಸಲಾಗುವುದು.

ಸಹಿ/–
(ಡಿ.ಕೆ.ಶಿವಕುಮಾರ್)
ಸಹ ನಿರ್ದೇಶಕರು ಹಾಗೂ ವರ್ಗಾವಣಾ
ಪ್ರಾಧಿಕಾರಿಗಳು
ಬೆಂಗಳೂರು ವಿಭಾಗ, ಬೆಂಗಳೂರು.